# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/49/16-17

ದಿನಾಂಕ :30/08/2016

ಉಪಸ್ಥಿತರು: **ಶ್ರೀ ಲೋಕೇಶ ಪಿ. ಎನ್.** ಕ.ಆ.ಸೇ

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಬಂಡ್ರಿ ಬಸಣ್ಣ ತಂದೆ ಲೇಟ್ ಬಂಡ್ರಿ ಲಿಂಗಪ್ಪ ಸಾ\|\| ಚಂದ್ರಶೇಖರಾಪುರ ಗ್ರಾಮ, ತಾ\|\| ಕೊಡ್ಲಗಿ ಜಿ\|\| ಬಳ್ಳಾರಿ<br><br>(ಶ್ರೀ ಕೆ.ಚಂದ್ರಶೇಖರ, ಜಿ.ಡಿ.ವಿಧ್ಯಾಶ್ರೀ, ವಕೀಲರು, ಬಳ್ಳಾರಿ) | 1. ತಹಶೀಲ್ದಾರರು, ಸಂಡೂರು<br>2. ಶ್ರೀ ಲಕ್ಕಪ್ಪ ತಂದೆ ಸಿದ್ದಲಿಂಗಪ್ಪ ಸಾ\|\| ಮಲ್ಲರಹಳ್ಳಿ ಗ್ರಾಮ, ಅಗ್ರಹಾರ (ಪೋಸ್ಟ್) ತಾ\|\| ಸಂಡೂರು<br>3. ಲೇಟ್ ಗೋನೆಪ್ಪ ನವರ ವಾರಸ್ಸುದಾರರು,<br>4. ಶ್ರೀಮತಿ ಹನುಮಕ್ಕ ತಂದೆ ಪೋಜಾರಹಳ್ಳಿ ಬಸಪ್ಪ<br>5. ಮಾರೆಪ್ಪ ತಂದೆ ಪೋಜಾರಹಳ್ಳಿ ಬಸಪ್ಪ ಸಾ\|\| ಮಾರಳ್ಳಿ ಗ್ರಾಮ, ಅಗ್ರಹಾರ(ಪೋಸ್ಟ್) , ತಾ\|\| ಸಂಡೂರು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ |
|---|---|---|---|
| ಸಂಡೂರು | ಅಗ್ರಹಾರ | 11C | 6-09 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನೀರಿಕ್ಷಕರು, ಸಂಡೂರು ಇವರ ಎಂ.ಆರ್. ನಂ. H45/2014-15 ದಿನಾಂಕ: 22-04-2016 ರ ಆದೇಶದ ವಿರುದ್ಧ ಮೇಲ್ಮನವಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿ ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿದ್ದಾರೆ. ವಿಳಂಬ ಮನ್ನಾ ಮಾಡಿ ಪ್ರಕರಣ ದಾಖಲಿಸಿ ಕೊಳ್ಳಲಾಯಿತು ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಪ್ರಕರಣವನ್ನು ದಾಖಲಿಸಿಕೊಂಡು ಉಭಯ ಪಕ್ಷಗಾರರಿಗೂ ನೋಟೀಸನ್ನು ನೀಡಿ ದಿನಾಂಕ 30/08/2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ವಾದಿಗಳು **ಈ ನ್ಯಾಯಾಲಯದಲ್ಲಿ** ಮೇಲ್ಮನವಿಯನ್ನು ಸಲ್ಲಿಸಿ, ಸಂಡೂರು ತಾಲ್ಲೂಕು ಅಗ್ರಹಾರ ಗ್ರಾಮದ ಸ. ನಂ. 11C **ಒಟ್ಟು ವಿಸ್ತೀರ್ಣ 6.09** ಎಕರೆಯಲ್ಲಿ ವಿಸ್ತೀರ್ಣ 2.02 ಎಕರೆ ಜಮೀನನ್ನು ಇತರೆ ಜಮೀನುಗಳೊಂದಿಗೆ ತಿಪ್ಪಯ್ಯ ತಂದೆ **ಹರಿಜನ ಗೋಣೆಪ್ಪ** ಇವರು ವಾದಿಯ ತಂದೆಯಾದ ಬಂಡ್ರಿ ಲಿಂಗಪ್ಪ ತಂದೆ ಲಿಂಗಪ್ಪ ಇವರಿಗೆ ನೊಂದಾಯಿತ ಬಿಡುಗಡೆ ಪತ್ರ **ಸಂಖ್ಯೆ 296/1962** ದಿನಾಂಕ 13/07/1962 ರ ಪ್ರಕಾರ ಹಕ್ಕು ಬಿಡುಗಡೆ ಮಾಡಿರುತ್ತಾರೆಂದು ಈವರೆವಿಗೂ ಸದರಿ ಜಮೀನಿನ

ಸ್ವಾಧೀನತೆಯನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ. ಮುಂದುವರೆದು ಪಹಣಿ ಕಾಲಂ 3 ರಲ್ಲಿರುವಂತೆ ವಾದಿಯ ಹೆಸರಿನಲ್ಲಿ ವಿಸ್ತೀರ್ಣ 2.02 ಎಕರೆ ಜಮೀನನ್ನು ಪಹಣಿ ಕಾಲಂ 12(2) ರಲ್ಲಿಯೂ ನಮೂದಿಸಲು ಕೋರಿರುತ್ತಾರೆ.

ಪ್ರಕರಣದ ವಿಚಾರಣೆಯನ್ನು ದಿನಾಂಕ 30/08/2016 ರಂದು ನಡೆಸಲಾಯಿತು, ವಾದಿಯ ಪರ ವಕೀಲರು ಹಾಗೂ ಪ್ರತಿವಾದಿ 3 ಮತ್ತು 4 ರವರು ಹಾಜರಾಗಿರುತ್ತಾರೆ. ವಾದಿಗೆ ಪ್ರತಿವಾದಿಗಳೊಂದಿಗೆ ಜಂಟಿಯಾಗಿ ಪಹಣಿಯಲ್ಲಿ ನಮೂದಿ ಇದ್ದು, ಕ್ರಯಪತ್ರದಂತೆ ಪ್ರತ್ಯೇಕ ವಿಸ್ತೀರ್ಣ ನಮೂದಿಸಿ ಕೊಡಲು ಕೋರಿರುತ್ತಾರೆ. ಪ್ರತಿವಾದಿ 2 ರವರು ಮೃತರಾಗಿದ್ದು, ಅವರಿಗೆ ವಿವಾಹವಾಗಿರುವುದಿಲ್ಲವೆಂದು ಎದರುದಾರರು ತಿಳಿಸಿರುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ವೆ ದಾಖಲೆಗಳಾದ ಆಕಾರಬಂದ ಪ್ರತಿ, ಹಿಸ್ಸಾ ಪ್ರತಿ ಹಾಗೂ ಭೂಮಿ ತಂತ್ರಾಂಶದ ಸ್ಕ್ರೀನ್ ಶಾಟ್ ಹಾಜರುಪಡಿಸಲು ತಹಶೀಲ್ದಾರರು, ಸಂಡೂರು ಇವರಿಗೆ ಆದೇಶಿಸುವ ಈಕೆಳಕಂಡ ಮಧ್ಯಂತರ ಆದೇಶ.

:: ಮಧ್ಯಂತರ ಆದೇಶ ::

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನಲೆಯಲ್ಲಿ, ಸಂಡೂರು ತಾಲ್ಲೂಕಿನ ಅಗ್ರಹಾರ ಗ್ರಾಮದ ಸ. ನಂ. 11ಸಿ ವಿಸ್ತೀರ್ಣ: 6-09 ಎಕರೆ ಜಮೀನಿಗೆ ಸಂಬಂಧಿಸಿದಂತೆ ಸರ್ವೆ ದಾಖಲೆಗಳಾದ ಆಕಾರಬಂದ ಪ್ರತಿ, ಹಿಸ್ಸಾ ಪ್ರತಿ ಹಾಗೂ ಭೂಮಿ ತಂತ್ರಾಂಶದ ಸ್ಕ್ರೀನ್ ಶಾಟಗಳನ್ನು ಸದರಿ ಪ್ರಕರಣದ ವಿಚಾರಣೆ ದಿನಾಂಕ 18/10/2016 ರೊಳಗಾಗಿ ಅಂದರೆ ದಿನಾಂಕ 03/10/2016 ರೊಳಗಾಗಿ ಈ ನ್ಯಾಯಾಲಯಕ್ಕೆ ಹಾಜರುಪಡಿಸಲು ತಹಶೀಲ್ದಾರರು, ಸಂಡೂರು ಇವರಿಗೆ ಆದೇಶಿಲಾಗಿದೆ.

ಸಹಾಯಕ ಆಯುಕ್ತರು,

ಬಳ್ಳಾರಿ

ಗೆ,

ತಹಶೀಲ್ದಾರರು, ಸಂಡೂರು